ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಟ್ರಾನ್ಸ್‌ಫಾರ್ಮರ್‌ಗೂ ಹೆಣ್ಣಿಗೂ ಏನು ವ್ಯತ್ಯಾಸ?*




ಒಂದು ಲೋಡ್ ಹೆಚ್ಚಿದರೆ ಢಂ, ಇನ್ನೊಂದು ಲೋಡ್ ಹೆಚ್ಚಿದರೆ ಡ್ರಂ!

ಪಿ.ಜೆ. ರಾಘವೇಂದ್ರ, ಮೈಸೂರು
*ಜಾಹೀರಾತಿಗೂ, ಆಶ್ವಾಸನೆಗೂ, ಭರವಸೆಗೂ ಇರುವ ವ್ಯತ್ಯಾಸವೇನು ಗುರು?*
ಒಂದು ಸುಳ್ಳು, ಒಂದು ಪೊಳ್ಳು, ಒಂದು ಟೊಳ್ಳು!

ಮಂಜುಳಾ ಪ್ರಸನ್ನ, ಮೈಸೂರು
*ರೋಗಗಳು ಬಂದಾಗ ಸಂತೋಷವಾಗುವಂತಿದ್ದದ್ದರೆ...?*
ಆ ರೋಗಿ ಹೋಗುವ ನರ್ಸಿಂಗ್ ಹೋಂನ ನರ್ಸ್‌ಗಳು ಬಹಳ ಸುಂದರಿಯರು ಎಂದು ಅರ್ಥವಾಗುತ್ತಿತ್ತು!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಹದ್ದಿನ ಕಣ್ಣಿಗೂ, ರಾಜಕಾರಣಿಯ ಕಣ್ಣಿಗೂ ಏನು ವ್ಯತ್ಯಾಸ?*
ಹದ್ದಿನ ಕಣ್ಣು ಹದ್ದಿನಲ್ಲಿರುತ್ತದೆ,



ರಾಜಕಾರಣಿಯ ಕಣ್ಣು ಹದ್ದು ಮೀರಿರುತ್ತದೆ!

ರಾಜೇಂದ್ರ ಹೆಗಡೆ, ಹಾವೇರಿ
*ಪಂಚಾಮೃತದಿಂದ ಜೀವನ ಪಾವನವಾದರೆ ಲಂಚಾಮೃತದಿಂದ ಏನು ಪಾವನ?*
ಕುಲಕೋಟಿಗಳು!

ಎಂ. ನಾಗವೈಷ್ಣವಿ, ಹಾಸನ
*ಕನ್ನಡವನ್ನು ಉಳಿಸಿ ಬೆಳೆಸಲು ಯಾವ ಗೊಬ್ಬರ ಹಾಕಬೇಕು?*
ಭಾಷಾಭಿಮಾನ ಬ್ರಾಂಡ್ ರಸಗೊಬ್ಬರ!

ಜಿನ್ನಸ್ ಥಾಮಸ್, ನೆಲ್ಯಾಡಿ
*ಹಣ್ಣುಹಣ್ಣು ಮುದುಕನಿಗೂ, ಹಣ್ಣಿಗೂ ಇರುವ ಸಂಬಂಧ?*
ಬಿದ್ದರೆ ಢಬ್ಬ!

ಕೆ.ಎಂ. ಲಿಂಗರಾಜು, ನಂಜನಗೂಡು
*ಚೆಂದುಟಿಗೂ, ಚೆಂಗುಲಾಬಿಗೂ ಇರುವ ವ್ಯತ್ಯಾಸವೇನು?*
ಒಂದು ಮನವನ್ನು ಅರಳಿಸುತ್ತದೆ, ಮತ್ತೊಂದು ಮನವನ್ನು ಕೆರಳಿಸುತ್ತದೆ!

ಶಿವಕುಮಾರ ಪತ್ರಿಮಠ, ಸುರಪೂರ
*ಆತ್ಮ-ಪರಮಾತ್ಮಗಳಿಗೆ ಇರುವ ವ್ಯತ್ಯಾಸವೇನು?*
ಆತ್ಮ ವರ್ಗವಾಗುವ ಸರ್ಕಾರಿ ನೌಕರ, ಪರಮಾತ್ಮ ಸರ್ಕಾರ!

ಶೋಭಾ ಎಂ.ಆರ್. ಹಾಸನ
*ಆಸೆ, ಬಯಕೆ, ವ್ಯಾಮೋಹ ಇವುಗಳ ಅಂತರವೇನು?*
ವಿವಾಹ, ಬಸಿರು, ಮಕ್ಕಳ ನಡುವಿನ ಅಂತರವೇ!

ಬಸವನಗೌಡ ಹೆಚ್.ಸಿ. ಶಿವಮೊಗ್ಗ
*ಕ್ಯಾಲೆಂಡರ್‌ನಲ್ಲಿ ಸರ್ಕಾರಿ ರಜಾ ದಿನಾಂಕಗಳನ್ನೇಕೆ ಕೆಂಪು ಬಣ್ಣದಲ್ಲಿ ಹಾಕಿರುತ್ತಾರೆ?*
ನಡೆಯುವ ಕೆಲಸಕ್ಕೆ ಸ್ಟಾಪ್ ಸಿಗ್ನಲ್ ಸೂಚಿಸಲು!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ದೇವರು ನಿಮಗೆ ಪತ್ರಕರ್ತನ ಪಾರ್ಟ್ ಬದಲು ರಾಜಕೀಯ ಪುಢಾರಿಯ ಪಾರ್ಟ್ ಕೊಟ್ಟಿದ್ದದ್ದರೆ...?*
'ನೀನೂ ಬೇಡ, ನೀನು ಕೊಡುವ ಜನ್ಮವೂ ಬೇಡ' ಎಂದು ತಿರಸ್ಕರಿಸಿ ಅಂತರ್ಪಿಶಾಚಿಯಾಗಿಯೇ ಇರುತ್ತಿದ್ದೆ!

ಮನೋರಮಾ ಪ್ರಭು, ಹೊನ್ನಾವರ
*ರಾಮಾಯಣದ ರಾಘವನಿಗೂ, ಮಹಾಭಾರತದ ಮಾಧವನಿಗೂ ಏನು ವ್ಯತ್ಯಾಸ?*
ರಾಘವ ದುಷ್ಟರನ್ನು ಹುಡುಕಿಕೊಂಡುಹೋಗಿ ವಧಿಸಿದ, ಮಾಧವ ದುಷ್ಟರನ್ನು ತನ್ನಲ್ಲಿಗೇ ಬರಮಾಡಿಕೊಂಡು ವಧಿಸಿದ!

## ಬಹುಮಾನಿತ ಪ್ರಶ್ನೆ

ಡೈರಿ ವಿಶ್ವನಾಥ್, ಬೆಂಗಳೂರು
*ಧಾರಾವಾಹಿಗಳಿಗೆ ಕೊನೆ ಉಂಟೆ?*
ಎಲ್ಲಾದರೂ ಉಂಟೇ! ಗೋಳಕ್ಕೆ ಅಳಿವುಂಟು, ಗೋಳಿಗೆ ಅಳಿವಿಲ್ಲ!

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಮೀಸೆ ಇಲ್ಲದವರನ್ನು ಪುರುಷೋತ್ತಮರೆಂದು ಕರೆಯುವುದು ತಪ್ಪಲ್ಲವೆ?*
ಹಾಗೆಂದು ಮೀಸೆ ಇರುವವರನ್ನೆಲ್ಲಾ ಪುರುಷೋತ್ತಮರು ಎನ್ನಲಾದೀತೇ? ನನ್ನ ಅಜ್ಜಿಗೆ ಮೀಸೆ ಇದೆ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಗಂಡನೆಂಬ ಪ್ರಾಣಿಗೆ ಹೆಂಡತಿ ರಾಣಿಯಾಗುತ್ತಾಳೆ. ಹೆಂಡತಿಗೆ ಗಂಡ?*
ಯಮಗಂಡ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮ ಪ್ರಧಾನಿಗಳ ಬಗ್ಗೆ ನಿಮ್ಮ ಪ್ರಾಮಾಣಿಕ ಅಭಿಪ್ರಾಯವೇನು?*



ಅಯ್ಯೋ ಪಾಪ!

ಹಾಡ್ಯ ಬಿ. ಜಯಾನಂದ, ಮೈಸೂರು
*ಹೆಸರನ್ನೇ ಬಂಡವಾಳ ಮಾಡಿಕೊಳ್ಳುವವರಿಗೆ ಏನೆನ್ನುತ್ತೀರಿ?*
ನೇಮ್ ಪ್ಲೇಟ್ ಬರೆಯುವವರು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಪದೇ ಪದೇ ಆಪರೇಷನ್ ಮಾಡಿದ್ದರಿಂದ ಕಮಲ ಬಾಡಿಹೋಯಿತೆ?*
ನಿಜ. **Body** ಹೋಯಿತು!

ಎನ್. ಗೋಪಾಲರಾವ್, ಬೆಂಗಳೂರು
*ಆಶ್ರಮಕ್ಕೂ, ಮಠಕ್ಕೂ ಇರುವ ವ್ಯತ್ಯಾಸವೇನು?*
ಆಶ್ರಮಗಳಲ್ಲಿ ಸೇವೆ ಹೆಚ್ಚು, ಮಠಗಳಲ್ಲಿ ಸೇವನೆ ಹೆಚ್ಚು!

■ ರಾಮ್